# ಕಾಮಿಡಿ ನಿರ್ದೇಶಕ

ಹಳೆಯ ಕಾಲದ ದೇವಸ್ಥಾನದ ಆವರಣದಲ್ಲೊಂದು ವಿಶಾಲವಾದ ಪೆಂಡಾಲ್. ಅಲ್ಲಿ ಫೋಟೊಗೆ ಪೋಸ್ ನೀಡಲು ನಾಯಕಿ ನಿರಾಕರಿಸಿದರು. ಆಮೇಲೆ ಸಿನಿಮಾ ನಿರ್ದೇಶಕರು ಆಕೆಯನ್ನು ಪುಸಲಾಯಿಸಿದ್ದಾಯಿತು. 'ಎಕೆ 47' ಎಂದರೆ ಆ ನಿರ್ದೇಶಕರಿಗೆ ಅಚ್ಚುಮೆಚ್ಚು. ಅವರೇ ಹೇಳಿಕೊಳ್ಳುವಂತೆ ಅವರ ಮಾತು ಕೂಡ ಆ ಶಸ್ತ್ರಾಸ್ತ್ರದಿಂದ ಹೊಮ್ಮುವ ಗುಂಡುಗಳಂತೆ. ಬಲಬದಿಯಲ್ಲಿ ಧರ್ಮಪತ್ನಿ ನಿಂತಿದ್ದರೂ ಎಡಬದಿಯಲ್ಲಿ ನಿಂತ ನಾಯಕಿಯನ್ನು ಅವರು ತುಸು ಹೆಚ್ಚೇ ಪೋಲಿ ಎನ್ನಬಹುದಾದ ಸಂಕೇತಗಳನ್ನು ಬಳಸಿ ಹೀಯಾಳಿಸಿದರು. ನಾಯಕಿ ಮೇಕಪ್ ಹಚ್ಚಿದ ಮುಖದಲ್ಲಿ ಮುಗ್ಧ ನಗು ತುಳುಕಿಸುತ್ತಾ, 'ವಾಟ್ ಈಸ್ ಹಿ ಇನ್‌ಸಿಸ್ಟಿಂಗ್?' ಎಂದು ಪ್ರಶ್ನೆ ತೇಲಿಬಿಟ್ಟರು. 'ಈ ಯಮ್ಮನಿಗೆ ಎಲ್ಲಾ ಗೊತ್ತಾಗುತ್ತೆ... ಡವ್ ಕಟ್ತಾಳೆ' ಎಂದು ನಿರ್ದೇಶಕ ತಮ್ಮ ಇನ್ನೊಂದು ಅಣಿಮುತ್ತನ್ನು ತೇಲಿಬಿಟ್ಟಾಗ, ಅವರ ಧರ್ಮಪತ್ನಿ ಕಷ್ಟಪಟ್ಟು ನಕ್ಕರಷ್ಟೆ.

ಈ ನಿರ್ದೇಶಕರು ವರ್ತನೆಯ ದೃಷ್ಟಿಯಿಂದ ಹತ್ತರಲ್ಲಿ ಹನ್ನೊಂದನೆಯವರು. ಅಭಿನಯಕ್ಕೆಂದು ಅವರು ಕೆಲವು ಚಿತ್ರಗಳಲ್ಲಿ ಬಣ್ಣ ಹಚ್ಚಿದ್ದೂ ಉಂಟು. ಒಮ್ಮೆ ಚಿತ್ರೀಕರಣ ನಡೆಯುತ್ತಿದ್ದ ಸ್ಥಳದಲ್ಲಿ ಪಡ್ಡೆ ಹುಡುಗರು ಜಮಾಯಿಸಿದ್ದರು. ಈ ನಿರ್ದೇಶಕ ಆ ಸಿನಿಮಾ ಮಟ್ಟಿಗೆ ನಟ ಅಷ್ಟೆ. ಮೇಕಪ್‌ಮನ್ ಬಂದು ಟಚಪ್ ಮಾಡಿದ. ಅಷ್ಟರಲ್ಲಿ ಕಾಫಿ ಬಂದಿತು. ಕಾಫಿ ಕುಡಿಯಲು ಶುರುವಿಟ್ಟುಕೊಳ್ಳುವ ಹೊತ್ತಿಗೆ ಅವರ ಮೊಬೈಲ್ ರಿಂಗಿಸಿತು. ಮೊಬೈಲ್‌ನಲ್ಲಿ ಮಾತನಾಡುತ್ತಾ ಜಂಗಮರಂತೆ ಅವರು ಸುಮಾರು ಹದಿನೈದು ಅಡಿ ದೂರ ನಡೆದುಕೊಂಡು ಹೋದರು. ಕಾಫಿ ಕುಡಿದದ್ದು ಮುಗಿದ ಮೇಲೆ ಲೋಟವನ್ನು ಎಲ್ಲಿಡಬೇಕೆಂದು ಕ್ಷಣ ಯೋಚಿಸಿ, ಆಮೇಲೆ ಅದನ್ನು ತಮ್ಮ ಅಂಗಿಯ ಜೇಬಿನಲ್ಲಿಯೇ ಇಟ್ಟುಕೊಂಡರು. ಮಾತನಾಡುವ ವರಸೆಯಲ್ಲಿ ತಲೆಗೂದಲಿನ ಮೇಲೆ ಕೈಯಾಡಿಸಿದ್ದರಿಂದ ಅದು ಕೆದರಿ ಹೋಗಿತ್ತು. ಅವರು ಆಸೀನರಾದಾಗ ಟಚಪ್ ಬಾಯ್ ಕನ್ನಡಿಯನ್ನು ಮುಂದೆ ಹಿಡಿದ. ಮತ್ತೆ ಅವರು ತಲೆ ಬಾಚಿಕೊಂಡರು. ಅಷ್ಟರಲ್ಲಿ ಇನ್ನೊಮ್ಮೆ ಫೋನ್ ರಿಂಗಣಿಸಿತು. ಚಿಂತೆಗೆ ಬಿದ್ದ ಆ ಸಿನಿಮಾ ನಿರ್ದೇಶಕರು, ತಾವು ನಟನನ್ನಾಗಿಸಿದ ನಿರ್ದೇಶಕ ಇದ್ದ ಸ್ಥಳಕ್ಕೇ ಧಾವಿಸಿದರು. ಫೋನ್‌ನಲ್ಲಿ ಮಾತನಾಡುವ ಅಷ್ಟೂ ಹೊತ್ತು ಅವರು ಕೂದಲನ್ನು ಮತ್ತೆ ಕೆದರಿಕೊಳ್ಳುವುದಿಲ್ಲವಷ್ಟೆ ಎಂದು ನಿಗಾ ವಹಿಸಿದರು. ಮಾತು ಮುಗಿದ ಮೇಲಷ್ಟೇ ಅವರಿಗೆ ಸಮಾಧಾನ. ಇನ್ನೇನು 'ಆಕ್ಷನ್' ಹೇಳಬೇಕು, ಅಷ್ಟರಲ್ಲಿ ಊದಿಕೊಂಡಿದ್ದ ಜೇಬಿನತ್ತ ಕಣ್ಣು ಬಿತ್ತು. ನೋಡಿದರೆ, ಅದರೊಳಗೆ ಕಾಫಿ ಲೋಟ. ಅದನ್ನು ತೆಗೆದಿಡಿಸುವ ಹೊತ್ತಿಗೆ ಮತ್ತೊಮ್ಮೆ ಫೋನ್ ಸದ್ದು. 'ನನ್ನ ಕೈಲಿ ಆ್ಯಕ್ಟ್ ಮಾಡಿಸಬೇಡ, ಅನುಭವಿಸ್ತೀಯಾ ಅಂತ ಹೇಳಿದೆ. ಈ ನನ್ ಮಗ ಕೇಳಲಿಲ್ಲ' ಎಂದು ಆ ಗತವೈಭವದ ನಿರ್ದೇಶಕರು ತಮ್ಮನ್ನು ತಾವೇ ಹೊಗಳಿಕೊಂಡರು. ಆ ಸಿನಿಮಾದ ನಿರ್ದೇಶಕರು ಕೆಲವು ನಿಮಿಷ ತಲೆಮೇಲೆ ಕೈಹೊತ್ತು ಕೂರದೆ ವಿಧಿ ಇರಲಿಲ್ಲ! ಅಂದಹಾಗೆ, ಆ ನಿರ್ದೇಶಕ ಕಂ ನಟರ ತಂದೆ ಒಂದು ಕಾಲದಲ್ಲಿ ಹಾಸ್ಯ ನಟರಾಗಿ ಕಚಗುಳಿ ಇಟ್ಟವರು.

• ಎನ್ವಿ

Printed and Published by S.V. Srinivasan on behalf of **The Printers (Mysore) Private Ltd.** Printed at M/s.Geetanjali Graphics # B-71, New No.84, KSSIDC, Indl. Estate, 6th Block, Rajajinagar, Bengaluru-560010. and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074. Editor: **K.N. SHANTH KUMAR.**

Editorial Office: 75, M.G Road, Bangalore-560 001 E-mail:editormy@mayura.co.in. Phone: 2588 0000, Fax: 25880618, Editorial:25880635,Circ:1800-425-8009, Advt: 1800-425-8008, © All rights reserved. Reproduction in whole or in part without permission is prohibited. RNI No 17129/68